ಅಸಲು ದಾವಾ ಸಂಖ್ಯೆ . 276/2014

ಡಿ .ಡಬ್ಲ್ಯೂ-1
ದಿಃ 09-04-2021
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಹೆಚ್ ಜಿ ಎಸ್ ವಕೀಲರಿಂದ ಃ-

3 ನೇ ಪ್ರತಿವಾದಿ ನನಗೆ ಗೊತ್ತು . ಅವರು ನಮ್ಮ ಪಕ್ಕದ ಸೈಟ್ ನವರು . ಕಾಳಮ್ಮ ಕೋಂ ಹುಚ್ಚಪ್ಪ ರವರು ದಾವಾ ಆಸ್ತಿಯನ್ನು ಖರೀದಿಸಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಅವರು 2011 ರಲ್ಲಿ ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ಕ್ರಯಕ್ಕೆ ಪಡೆದಾಗಿನಿಂದ ವಾದಿಯ ಹೆಸರಿಗೆ ಖಾತೆ, ಪಹಣಿ ಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿಯು ದಾವ ಆಸ್ತಿಗೆ ಮಾಲೀಕರು ಮತ್ತು ಹಕ್ಕುದಾರರು ಎಂದರೆ ಸರಿಯಲ್ಲ. ಸದರಿಯವರು ದಾವವ ಆಸ್ತಿಯನ್ನು ಪ್ರಕಾಶ್ ಎಂಬುವವರಲ್ಲಿ ಅಡಮಾನಪಡಿಸಿ ನಂತರದಲ್ಲಿ ಅದನ್ನು ಬಿಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯು ದಾವಾ ಆಸ್ತಿಯ ಶಾಂತಿಯುತ ಅನುಭವದಲಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ನಾವು ಮೂರು ಜನ ಸೇರಿ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇವೆಂದರೆ ಸರಿಯಲ್ಲ. ವಾದಿಯು ನಮಗೆ ತೊಂದರೆ ಕೊಟ್ಟಿರುತ್ತಾರೆ . ನಾನು ವಾದಿಗೆ ತೊಂದರೆ ಕೊಡುತ್ತಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವುಗಳು ದಾವಾ ಬಿ ಶೆಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿರುತ್ತೇವೆಂದರೆ ಸರಿಯಲ್ಲ. ನಾನು ವಿನಾಃ ಕಾರಣ ವಾದಿಗೆ ತೊಂದಗೆ ಕೊಡುತ್ತಿದ್ದೇವೆಂದರೆ ಸರಿಯಲ್ಲ. ನಾವು ಮೂವರು ಪ್ರತಿವಾದಿಯರು ಸೇರಿ ವಾದಿಯ ಸ್ವತ್ತಿಗೆ ಒತ್ತುವರಿ ಮಾಡಿರುವ ವಿಚಾರ 2014 ರಲ್ಲಿ ವಾದಿಗೆ ಗೊತ್ತಾಯಿತು ಎಂದರೆ ಸರಿಯಲ್ಲ. ನಾವು ಒತ್ತುವರಿ ಮಾಡಿರುವುದಿಲ್ಲ. ಒತ್ತುವರಿ ಬಿಡಿಸಿಕೊಡಬೇಕೆಂದು ದಾವ ಹೂಡಿದರುತ್ತಾರೆಂದರೆ ಸರಿಯಲ್ಲ. ಸುಳ್ಳು ದಾಖಲೆಯ ಆಧಾರದ ಮೇರೆಗೆ ದಾವಾ ಹೂಡಿರುತ್ತಾರೆ . ನಾನು 1 ಮತ್ತು 2 ನೇ ಪ್ರತಿವಾದಿಯರ ಮಾತು ಕೇಳಿ ವಾದಿಯ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ. ಸಲ್ಲಿಸಿ , ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು 3 ನೇ ಪ್ರತಿವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದ ಃ-

3 ನೇ ಪ್ರತಿವಾದಿ ನಮ್ಮ ಸೈಟ್ ಪಕ್ಕ ಇದ್ದಾರೆ ಎಂದರೆ ಸರಿ . ಅವರು ನನ್ನ ಸೈಟಿನ ಪಶ್ಚಿಮ

ದಿಕ್ಕಿಗೆ ಬರುತ್ತಾರೆ. ಸದರಿಯವರು ಸದರಿ ಸೈಟ್ ನಲ್ಲಿ ವೆಲ್ಡಿಂಗ್ ಶಾಪ್ ಇಟ್ಟುಕೊಂಡಿರುತ್ತಾರೆಂದರೆ ಸರಿ. ಸದರಿಯವರ ತಂದೆಯ ಹೆಸರು ಪರಮೇಶ್ವರಪ್ಪ . ಹಾಲಿ ಸದರಿ ಸೈಟ್ ಪರಮೇಶ್ವರಪ್ಪ ರವರ ಹೆಸರಿಗೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸೈಟ್ ನಂ 205, ಹಳೇ ವಾರ್ಡ್ ಸಂಖ್ಯೆ 254 ಎಂದರೆ ಸರಿ . ಅವರು ತಮ್ಮ ಜಾಗದಲ್ಲಿ, ನಾನು ನಮ್ಮ ಜಾಗದಲ್ಲಿದ್ದೇವೆ ಎಂದರೆ ಸರಿ .

ಮರುವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಿಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.